**ನಾವು ನಂಬಿ ನೆಚ್ಚಿ ಕೊಟ್ಟ ಆ ಮಾಹಿತಿಗಳೆಲ್ಲ ಸುರಕ್ಷಿತವೆ? ನಮ್ಮ ದುಡಿಮೆಯ ಪೂರಾ ಲೆಕ್ಕಾಚಾರ, ನಾಳೆಯ ಖರ್ಚಿನ ಹಣ, ನಾಡಿದ್ದಿಗೆ ಬೇಕಾದ ಸೇವಿಂಗ್ಸ್, ವೈಯಕ್ತಿಕ ಮಾಹಿತಿ ಹೀಗೆ ಎಲ್ಲಾ ಎಂದರೆ ಎಲ್ಲವನ್ನೂ ಡೇಟಾ ರೂಪದಲ್ಲಿ ಆನ್‌ಲೈನ್ ಎಂಬ ಗಟ್ಟಿ ಬಾಗಿಲಿನ, ದೊಡ್ಡ ಬೀಗದ ಕೈಯ ಖಜಾನೆಯಲ್ಲಿ ತುಂಬಿದ್ದೇವಲ್ಲ... ಆ ಖಜಾನೆಯ ಹಿಂಬಾಗಿಲು ಎಷ್ಟು ಗಟ್ಟಿಯಿದೆ ಎಂಬುದನ್ನು ನಾವು ಎಂದಾದರೂ ಪರಿಶೀಲಿಸಿದ್ದೇವೆಯೇ?**






ದೂರದಲ್ಲಿ ಸಿಳ್ಳೆ ಹೊಡೆಯುತ್ತ ನಿಂತಿರುವಾಗ ತಂತ್ರಜ್ಞಾನ ಇಲ್ಲದ ಬದುಕನ್ನು ಹೇಗೆ ಕಲ್ಪಿಸಿಕೊಳ್ಳುವುದು?

'ಡಿಜಿಟಲೈಸೇಷನ್' ಕ್ರಾಂತಿ ನಮ್ಮ ಬದುಕಿಗೆ ಏನೆಲ್ಲವನ್ನೂ ಕೊಟ್ಟಿದೆಯೋ, ಅಷ್ಟನ್ನೇ ಅಥವಾ ಅದಕ್ಕೂ ಮುಖ್ಯವಾದವುಗಳನ್ನು ನಾವೂ ಅದಕ್ಕೆ ತೆತ್ತುಕೊಂಡಿದ್ದೇವೆ. ಸಂಬಂಧದ ಶಿಥಿಲತೆ, ಕೌಟುಂಬಿಕ ವ್ಯವಸ್ಥೆಯ ಬಿರುಕುಗಳು, ಅತಿಯಾದ ಒತ್ತಡ ತಂದಿಕ್ಕುವ ಸ್ಟ್ರೆಸ್ ಇಂಥ ಅಮೂರ್ತ ಸಂಗತಿಗಳನ್ನು ಸದ್ಯಕ್ಕೆ ಆಚೆಗಿಟ್ಟು, ಇಂದಿನ ನಮ್ಮ ಭ್ರಮಿತ ಸುಖದ ಬದುಕಿನ ಭಾಗವಾಗಿರುವ ಭೌತಿಕ ಸಂಗತಿಗಳನ್ನೇ ತೆಗೆದುಕೊಳ್ಳೋಣ. ಹೇಳಿಕೇಳಿ ಇದು ಇನ್‌ಸ್ಟಂಟ್ ಯುಗ. ನಮ್ಮ ಅಡುಗೆಮನೆಯ ಬಹುಪಾಲು ಜಾಗವನ್ನು ಈ ಇನ್‌ಸ್ಟಂಟ್‌ಫುಡ್‌ಗಳೇ ಆವರಿಸಿಕೊಂಡಿವೆ. ತಿನ್ನ ಅನ್ನ ಬುದ್ಧಿಯಾಗುತ್ತದೆ ಎಂಬ ಮಾತು ಸುಳ್ಳಲ್ಲವಲ್ಲ. ನಮ್ಮ ಬುದ್ಧಿಭಾವ, ಜೀವನಕ್ರಮಗಳಲ್ಲಿಯೂ ಈ ಇನ್‌ಸ್ಟಂಟ್‌ನೆಸ್ ಗಾಢವಾಗಿಯೇ ಆವರಿಸಿಕೊಂಡಿದೆ. ಹಾಗಾಗಿಯೇ ನಾವೆಲ್ಲವೂ ಹ್ಯಾಪಿಗರಾಗಿ ಇದ್ದೇವೋ ಇಲ್ಲವೋ, ಆ್ಯಪಿಗರಂತೂ ಆಗಿದ್ದೇವೆ. ಉಂಡುಟ್ಟು ಮಲಗುವುದರಿಂದ ಹಿಡಿದು ದೈನಂದಿನ ವ್ಯವಹಾರಗಳಿಗೂ ಬಗೆಬಗೆಯ ಆ್ಯಪ್‌ಗಳ ಮೇಲೆ ಅವಲಂಬಿತರಾಗಿದ್ದೇವೆ.

ಈ ತಾಂತ್ರಿಕ ಬದುಕನ್ನು ಕಟ್ಟಿಕೊಳ್ಳುವ ಭರದಲ್ಲಿ ನಮ್ಮ ಬದುಕಿನ ಒಂದಿಷ್ಟು ಮಾಹಿತಿಗಳನ್ನು (ಕೆಲವೊಮ್ಮೆ ನಮ್ಮ ಸಂಗಾತಿಗಳಿಂದಲೂ ಮುಚ್ಚಿಟ್ಟ ಸಂಗತಿಗಳನ್ನು) ಆ್ಯಪಿನ ತೆಕ್ಕೆಗೆ ಒಪ್ಪಿಸುತ್ತಿದ್ದೇವಲ್ಲ. 'ನಿಮ್ಮ ಫೋನಿನ ನರನಾಡಿಗಳನ್ನು ಜಾಲಾಡಲು ನಮಗೆ ಅನುಮತಿ ನೀಡುವಿರಾ?' ಎಂದು ನಯವಾಗಿ ಕೇಳುತ್ತಲೇ ನಮ್ಮ ಪರ್ಸನಲ್ ಜಗತ್ತನ್ನು ಆನ್‌ಲೈನ್ ಎಂಬ ಸರ್ವವ್ಯಾಪಿ ತನ್ನ